## ಒಳ್ಳೆಯ ಸಿನಿಮಾ ಇಲ್ಲವೇ?

ಕಲರ್ಸ್ ಕನ್ನಡದಲ್ಲಿ 'ಪುಟ್ಟ ಗೌರಿ' ಭಾಷಣ ಕೇಳಿ ಕೇಳಿ ಸಾಕಾಗಿದೆ. 'ಲಕ್ಷ್ಮೀ ಬಾರಮ್ಮ' ಎಲ್ಲಿಂದೆಲ್ಲಿಗೋ ಹೋಗುತ್ತಿದೆ. ದಯಮಾಡಿ ಎಲ್ಲಾ ಮುಗಿಸಿ. ಝೀ ಕನ್ನಡದಲ್ಲಿ ಒಳ್ಳೊಳ್ಳೆ ಧಾರಾವಾಹಿಗಳು ಬರುತ್ತಿವೆ. ಇನ್ನು ಉದಯ ಮೂವೀಸ್‌ನಲ್ಲಿ 4 ಸಿನಿಮಾಗಳು ಬಿಟ್ಟರೆ ಬೇರೆ ಯಾವುದೂ ಸಿಕ್ಕ ಹಾಗಿಲ್ಲ. ಸದ್ಯದ ನಮ್ಮ ವೇದನೆಗೆ ಮುಕ್ತಿ ನೀಡಿ. ಮುಂದೇನಾದರೂ ಒಳ್ಳೆಯ ಸಿನಿಮಾಗಳು ಬರುತ್ತಾ ನೋಡೋಣ.

—ಎ. ಶಾರದ, ಕೊಟ್ಟೂರು

## ದಾರಿ ತಪ್ಪಿದ 'ಕಿನ್ನರಿ'

ನಾನು ಕಲರ್ಸ್ ಕನ್ನಡ ಟಿ.ವಿ.ಯಲ್ಲಿ ಪ್ರಸಾರವಾಗುತ್ತಿರುವ 'ಕಿನ್ನರಿ' ಧಾರಾವಾಹಿಯನ್ನು ಪ್ರಾರಂಭದಿಂದ ನೋಡುತ್ತಿದ್ದೇನೆ. ನನ್ನ ಹಾಗೂ ಇತರ ಹಲವಾರು ವೀಕ್ಷಕರ ಅಭಿಪ್ರಾಯ– ಅಜ್ಜಿ ಗಾಯತ್ರಿಯನ್ನು ಬಹಳ ಕೆಟ್ಟದಾಗಿ ತೋರಿಸಲಾಗಿದೆ. ಕಿನ್ನರಿಯ ಮದುವೆಯ ನಂತರ ಕಿನ್ನರಿಯ ಜೀವನ ಉತ್ತಮವಾಗಿಲ್ಲ. ಐಶ್ವರ್ಯ ಬದಲಾಗಿಲ್ಲ. ಧಾರಾವಾಹಿಗೆ ಈಗ ಕೊಟ್ಟಿರುವ ತಿರುವು ಕೆಟ್ಟದಾಗಿದೆ. ಕನ್ನಡ ಜನತೆಗೆ ಈ ಧಾರಾವಾಹಿ ಅನುಕರಣೀಯವಲ್ಲ ಹಾಗೂ ಸಮಾಜಕ್ಕೆ ಉತ್ತಮವಾದುದೂ ಅಲ್ಲ.

—ಕೆ. ಸುಶೀಲ್, ಮಂಗಳೂರು

## ವೈವಿಧ್ಯಮಯ 'ನಾಗಕನ್ನಿಕೆ'

ಕಲರ್ಸ್ ಸೂಪರ್ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ನಾಗಕನ್ನಿಕೆ' ಧಾರಾವಾಹಿ ಭಿನ್ನವಾಗಿ ಮೂಡಿಬರುತ್ತಿದೆ. 'ಫ್ಯಾಂಟಸಿ' ಕಥೆಯಾಗಿದ್ದು, ಶಿವಾನಿ– ಶೇಷರ ಪಾತ್ರ ಅದ್ಭುತವೆನಿಸಿದೆ. ಎಲ್ಲಾ ಭಾವನೆಗಳನ್ನು ಒಳಗೊಂಡ ಸರ್ಪಕಥೆ ಇದಾಗಿದೆ. ಈ ಎರಡೂ ಸರ್ಪಗಳು ಯಾವ ರೂಪದಲ್ಲಾದರೂ ಕಾಣಿಸಿಕೊಳ್ಳಬಹುದಾದ ಪಾತ್ರಗಳೇ ಧಾರಾವಾಹಿಯು ವೇಗವಾಗಿ ಮುನ್ನುಗ್ಗಲು ಕಾರಣ. ಪ್ರೀತಿ, ಪ್ರತೀಕಾರ, ಹಾಸ್ಯ, ಭಯ, ಕರುಣೆ ಎಂಬ ನಾನಾ ಅಂಶಗಳನ್ನು ಹೊಂದಿರುವ ಈ ನಾಗಕನ್ನಿಕೆ ಒಟ್ಟಿನಲ್ಲಿ ಚೆನ್ನಾಗಿ ಮೂಡಿಬಂದು ನಮ್ಮನ್ನು ವರ್ಣರಂಜಿತ ಲೋಕಕ್ಕೆ ಕರೆದೊಯ್ಯುತ್ತಿದೆ.

— ಸಾನ್ವಿ ಎಂ., ಜಿ.ಕೆ.ಹೊಸೂರು

ವಾರದ ಪತ್ರ

## ಕರ್ಕಶ ಸಂಗೀತ

ಕನ್ನಡ ಸುದ್ದಿ ವಾಹಿನಿಗಳ ಹಿನ್ನೆಲೆಯಲ್ಲಿ ಪ್ರಸಾರವಾಗುವ ಹಿನ್ನೆಲೆ ಸಂಗೀತ ತುಂಬಾ ಕರ್ಕಶವಾಗಿರುತ್ತದೆ. ಅಷ್ಟೇ ಅಲ್ಲ ಅದರ ವಾಲ್ಯೂಮ್ ಕೂಡ ತುಂಬಾ ಹೆಚ್ಚಾಗಿರುತ್ತದೆ. ಯಾವುದೋ ಒಂದು ಸಾಮಾನ್ಯ ಸುದ್ದಿಯನ್ನು ಪ್ರಮುಖ ಸುದ್ದಿಯೆಂಬಂತೆ ಬಿಂಬಿಸಲು ಗುಡುಗು– ಸಿಡಿಲಿನಂತಹ ಕರ್ಕಶವಾದ ಹಿನ್ನಲೆ ಸಂಗೀತವನ್ನು ಬಳಸಲಾಗುತ್ತದೆ. ವಿರಾಮದಲ್ಲಿ ಬರುವ ಜಾಹೀರಾತುಗಳ ಅಬ್ಬರ ಕೂಡ ಕಿವಿ ಗಡಚಿಕ್ಕುವಂತಿರುತ್ತದೆ. ಸುದ್ದಿಯ ಕಾಲದಲ್ಲಿ ಇದ್ದ ಧ್ವನಿಯ ವಾಲ್ಯೂಮ್ ಜಾಹೀರಾತುಗಳ ಕಾಲದಲ್ಲಿ ಏಕಾಏಕಿ ಹೆಚ್ಚಾಗುತ್ತದೆ. ಹೀಗಾಗಿ ಪ್ರತಿ ವಿರಾಮದಲ್ಲಿ ಧ್ವನಿಯ ವಾಲ್ಯೂಮ್ ಕಡಿಮೆ ಮಾಡಿ ಪುನಃ ವಾಚನದ ಸಮಯದಲ್ಲಿ ಹೆಚ್ಚಿಸಬೇಕಾಗುತ್ತದೆ.

ಇನ್ನು ಸುದ್ದಿ ವಾಹಿನಿಗಳು ಪ್ರಸಾರ ಮಾಡುವ ಸುದ್ದಿಗಳು ಆ ದೇವರಿಗೇ ಪ್ರೀತಿ. ಇಲ್ಲದ ಸುದ್ದಿಯನ್ನು ಇದ್ದಂತೆ ಪ್ರಸಾರ ಮಾಡಿ ಜನರಲ್ಲಿ ಆತಂಕ ಸೃಷ್ಟಿಸಲು ಇವು ಸದಾ ಪ್ರಯತ್ನಿಸುತ್ತಿರುತ್ತವೆ. ಅವರವರ ರಾಜಕೀಯ ನಿಲುವಿಗೆ ತಕ್ಕಂತೆ ಸುದ್ದಿಗಳನ್ನು ಪ್ರಸಾರ ಮಾಡುವುದು ಮತ್ತು ಸುದ್ದಿಗಳನ್ನು ಅತಿರಂಜಿತಗೊಳಿಸುವುದು ಸುದ್ದಿ ವಾಹಿನಿಗಳಿಗೆ ಒಪ್ಪದು.

—ಮುರಲೀಧರ ಕುಲಕರ್ಣಿ, ಬೀದರ್

## ಪೆಟ್ರೋಲ್ ಉಳಿಸಿ!

ಕಿರುತೆರೆಯಲ್ಲಿ ಬಿತ್ತರವಾಗುವ ಬಹುತೇಕ ಧಾರಾವಾಹಿಗಳಲ್ಲಿ ಈ ದೃಶ್ಯ ಸಾಮಾನ್ಯವಾಗಿ ಮೂಡಿಬರುತ್ತದೆ. ಕಾರ್‌ನಲ್ಲಿ ಹೋಗುತ್ತಾ, ಸಂಭಾಷಣೆ ನಡೆಸುವುದು ಇಲ್ಲವೆ ಕಾರ್‌ನಲ್ಲಿ ಹಿಂಬಾಲಿಸುವುದು. ಆ ದೃಶ್ಯ ಅಗತ್ಯ ಇರಲಿ, ಇಲ್ಲದಿರಲಿ; ಇಂತಹ ದೃಶ್ಯವನ್ನು ಧಾರಾವಾಹಿಯಲ್ಲಿ ಸೇರಿಸುವುದು ಒಂದು ಫ್ಯಾಷನ್ ಆಗಿಹೋಗಿದೆ. ಇಂತಹ ದೃಶ್ಯಗಳ ಚಿತ್ರೀಕರಣ ನಡೆಯುತ್ತಿರುವಾಗ, take ಮತ್ತು re-takeಗಳ ಪುನರಾವರ್ತನೆ ಅದೆಷ್ಟು ಬಾರಿ ಆಗುತ್ತೋ!

ಸಂಭಾಷಣೆ ನಡೆಸಲು ಕಾರ್ ಬೇಕೇ ಬೇಕೆ? ಒಬ್ಬರನ್ನೊಬ್ಬರು ಕಾರ್‌ನಲ್ಲಿ ಹಿಂಬಾಲಿಸುವ ಪ್ರಸಂಗವನ್ನು ಸೂಚ್ಯವಾಗಿ ತೋರಿಸಲು ಸಾಧ್ಯವಿಲ್ಲವೆ? ಪೆಟ್ರೋಲ್ ಬೆಲೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಇಂತಹ ದೃಶ್ಯಗಳನ್ನು ಕೈಬಿಟ್ಟು, ಪೆಟ್ರೋಲ್ ಉಳಿಸಿದರೆ ಆಗುವುದಿಲ್ಲವೇ?

- ಉಡುಪಿ ಅನಂತೇಶ ರಾವ್, ಬೆಂಗಳೂರು

## ಏನಿದು ವಾಹಿನಿಗಳ ಲೀಲೆ!

ಕೆಲವು ಸುದ್ದಿ ವಾಹಿನಿಗಳಲ್ಲಿ ಸುದ್ದಿ ವಿಶ್ಲೇಷಣೆ ನೋಡಲಾರದಷ್ಟು, ಕೇಳಲಾರದಷ್ಟು ಬಿಗಡಾಯಿಸುತ್ತಿದೆ. ರಾತ್ರಿ ಪ್ರಸಾರವಾಗುವ ಸುದ್ದಿಗಳ ವಿಶ್ಲೇಷಣೆಯಲ್ಲಿ ಬರುವ ಗಣ್ಯರ ನಡುವಿನ ಚರ್ಚೆಗಳು ಇಬ್ಬರ ಮಾತಿನ ಯುದ್ಧದಲ್ಲಿ ಏನೂ ಕೇಳುವುದಿಲ್ಲ. ಟಿವಿ ಬಂದ್ ಮಾಡುವುದೇ ಒಳ್ಳೆಯದೆಂಬ ಅಭಿಪ್ರಾಯಕ್ಕೆ ನಾನು ಬಂದಿದ್ದೇನೆ.

ಕೆಲವರು ಅತಿಥಿಗಳಿಗೆ ಮಾತನಾಡಲು ಬಿಡದೇ ತಾವೇ ಅತಿ ಹೆಚ್ಚು ಮಾತನಾಡುವುದರಿಂದ ಯಾರ ಮಾತನ್ನೂ ವೀಕ್ಷಕರು ಕೇಳಿಸಿಕೊಳ್ಳಲಾಗುವುದಿಲ್ಲ. ಈ ಕಾರ್ಯಕ್ರಮಗಳನ್ನು ತಾಳ್ಮೆಯಿಂದ ನಿರ್ವಹಿಸಲು ಸಾಧ್ಯವಿಲ್ಲವಾದರೆ ಕಾರ್ಯಕ್ರಮವನ್ನು ವೀಕ್ಷಕರ ಹಿತದೃಷ್ಟಿಯಿಂದ ನಿಲ್ಲಿಸಿಯೇ ಬಿಡಿ.

—ಕೊ.ಸು.ನರಸಿಂಹ ಮೂರ್ತಿ, ಮೈಸೂರು

## ಹಿರಿಯ ನಟನಿಗೆ ಶ್ರದ್ಧಾಂಜಲಿ ಇಲ್ಲವೇ?

ಹಿರಿಯ ಚಿತ್ರನಟ ಆರ್.ಎನ್.ಸುದರ್ಶನ್ ಅವರು ಸೆಪ್ಟೆಂಬರ್ 8ರ ಶುಕ್ರವಾರ ನಿಧನರಾದರು. ಕಲರ್ಸ್ ಕನ್ನಡ ವಾಹಿನಿಯ 'ಅಗ್ನಿಸಾಕ್ಷಿ' ಧಾರಾವಾಹಿಯಲ್ಲಿ ಸುದರ್ಶನ್ ಸ್ವಾಮೀಜಿಯ ಪಾತ್ರ ನಿರ್ವಹಿಸುತ್ತಿದ್ದರು. ಅಂದು ರಾತ್ರಿ ಎಂಟು ಗಂಟೆಗೆ ಅಗ್ನಿಸಾಕ್ಷಿ ಧಾರಾವಾಹಿ ಆರಂಭವಾಗುವ ಮುನ್ನ ಆ ಧಾರಾವಾಹಿಯ ತಂಡದವರು ಸುದರ್ಶನ್ ಅವರ ನಿಧನಕ್ಕೆ ಸಂತಾಪ ಸೂಚಿಸುವ ಒಂದೇ ಒಂದು ಸಾಲನ್ನಾದರೂ ಪ್ರಕಟಿಸಬಹುದು ಎಂದುಕೊಂಡಿದ್ದರು ವೀಕ್ಷಕರು. ಆದರೆ ಇದು ಹುಸಿಯಾಯಿತು. ಆರ್.ಎನ್.ಸುದರ್ಶನ್ ಅವರಿಗೂ ತಮಗೂ ಸಂಬಂಧವೇ ಇಲ್ಲವೇನೋ ಎಂಬಂತೆ ಶುಕ್ರವಾರ ಪ್ರಸಾರವಾದ ಅಗ್ನಿಸಾಕ್ಷಿ ಧಾರಾವಾಹಿಯಲ್ಲಿ ಯಾವುದೇ ಸಂತಾಪದ ಮಾತುಗಳು ಕೇಳಿಬರಲಿಲ್ಲ.

ತಮ್ಮ ಧಾರಾವಾಹಿಯಲ್ಲಿ ನಟಿಸುತ್ತಿದ್ದ ಹಿರಿಯ ನಟ ನಿಧನರಾದರೂ ಸಂತಾಪ, ಶೋಕ, ವಿಷಾದ ಅಥವಾ ಶ್ರದ್ಧಾಂಜಲಿಯನ್ನು ಒಂದೇ ಒಂದು ಮಾತಿನಿಂದಲೂ ವ್ಯಕ್ತಪಡಿಸದಿರುವುದು ಅಚ್ಚರಿ ತಂದಿತು.

-ಪಿ.ಜೆ.ರಾಘವೇಂದ್ರ, ಮೈಸೂರು

## ಹಿತದ ಮಿತಿಯಲ್ಲಿ ವಾರಸ್ದಾರ

'ಝೀ ಕನ್ನಡ' ವಾಹಿನಿಯಲ್ಲಿ ಸಂಜೆ 7.30 ರಿಂದ 8.00 ಘಂಟೆವರೆಗೆ ಪ್ರಸಾರವಾಗುತ್ತಿರುವ 'ವಾರಸ್ದಾರ' ಧಾರಾವಾಹಿಯು ಚೆನ್ನಾಗಿ ಮೂಡಿಬರುತ್ತಿದೆ. ಇದರಲ್ಲಿ 'ಅಜ್ಜಿ' ಪಾತ್ರವನ್ನು ಮಾಡಿರುವ ನಟಿಯಂತೂ ತುಂಬಾ ಚೆನ್ನಾಗಿ ನಟಿಸಿದ್ದಾರೆ. ತಮ್ಮ ಪಾತ್ರದ ಘನತೆಯನ್ನರಿತು ಆ ಪಾತ್ರದ ಗುರುತರವಾದ ಜವಾಬ್ದಾರಿಯನ್ನು ಮನನ ಮಾಡಿಕೊಂಡು, ಪಾತ್ರಕ್ಕೆ ಸಂಪೂರ್ಣ ನ್ಯಾಯವನ್ನು ಒದಗಿಸಿದ್ದಾರೆ. ಬೇರೆಯುವರೂ ಸಹ ತಮ್ಮ ಪಾತ್ರಗಳನ್ನು ಹಿತಮಿತವಾಗಿ ಅಭಿನಯಿಸಿ ಒಟ್ಟಾರೆ ಧಾರಾವಾಹಿಯು ಚೆನ್ನಾಗಿ ಬರುತ್ತಿದೆ.

—ಶ್ರೀದೇವಿ ಹೆಬ್ಬಾರ್, ಬೆಂಗಳೂರು